ಗಮನ ಸೆಳೆಯುವ ಸೂಚನೆಗಳು

1) ಹಾವೇರಿ ಮತ್ತಿತರ ಕಡೆಗಳಲ್ಲಿ ವಿದ್ಯುಚ್ಛಕ್ತಿ ಅಡಚಣೆಯಿಂದ ಸಾರ್ವಜನಿಕರಿಗೆ ತೊಂದರೆ

ಶ್ರೀ ಸಿ. ಎಂ. ಉದಾಸಿ —ಮಾನ್ಯ ಅಧ್ಯಕ್ಷರೆ, ಧಾರವಾಡ ಜಿಲ್ಲೆಯ ಹಾವೇರಿ, ಹಾನಗಲ್, ಹಿರೇಕೆರೂರು, ರಾಣಿಬೆನ್ನೂರು, ಬ್ಯಾಡಗಿ ತಾಲ್ಲೂಕುಗಳಲ್ಲಿ ವಿದ್ಯುತ್ ಸರಬರಾಜು ಸರಿಯಾಗಿ ಆಗದೆ, ರೈತರಿಗೆ ಹಾಗೂ ಉದ್ಯಮಿಗಳಿಗೆ ತೊಂದರೆಯಾಗಿರುವ ಬಗ್ಗೆ ವಿದ್ಯುಚ್ಛಕ್ತಿ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಜೆ. ಹೆಚ್. ದೇಶಮುಖ್ (ವಿದ್ಯುಚ್ಛಕ್ತಿ ಸಚಿವರು).— ನನ್ನ ಹೇಳಿಕೆ ಈ ರೀತಿ ಇದೆ.

ಹಾವೇರಿಯಲ್ಲಿ ಹಾಲಿ ಇರುವ ೧೧೦/೫೫ ಕೆ.ವಿ.ಯ ಎರಡು ೧೦ ಎಂ.ವಿ.ಎ. ಟ್ರಾನ್ಸ್‌ಫಾರ್ಮರುಗಳು ಸಾಮರ್ಥ್ಯಕ್ಕಿಂತ ಹೆಚ್ಚು ಓವರ್ ಲೋಡ್ ಆಗುತ್ತಿರುವುದರಿಂದ ಅನಿವಾರ್ಯವಾಗಿ ಕೊಂಚ ಮಟ್ಟಿನ ಲೋಡ್ ಷೆಡಿಂಗ್ ಮಾಡಬೇಕಾಗಿ ಬಂದಿದೆ. ಇದು ಮುಖ್ಯವಾಗಿ ಹಾವೇರಿ, ಬ್ಯಾಡಗಿ, ಹಾನಗಲ್ ತಾಲ್ಲೂಕುಗಳಲ್ಲಿ ಅಡಚಣೆ ಉಂಟುಮಾಡಿದೆ. ಒಂದು ೧೧೦/೧೧ ಕೆ. ವಿ. ೧೦ ಎಂ.ವಿ.ಎ. ಟ್ರಾನ್ಸ್‌ಫಾರ್ಮರಂ ದುರಸ್ತಿಯಲ್ಲಿದ್ದು ಹುಬ್ಬಳ್ಳಿಯಿಂದ ಹಾವೇರಿಗೆ ರವಾನಿಸಿ ೮-೧೦ ದಿನ ಗಳೊಳಗಾಗಿ ಸ್ಥಾಪಿಸುವ ಕಾರ್ಯ ಕೈಗೊಂಡಿದೆ, ಇದಾದ ನಂತರ ಈ ತಾಲ್ಲೂಕುಗಳಲ್ಲಿ ಅಡಚಣೆ ಕಡಿಮೆಯಾಗುವುದು.

ರಾಣಿಬೆನ್ನೂರು ಮಂತಾದ ಹಿರೇಕೆರೂರು ತಾಲ್ಲೂಕುಗಳಲ್ಲಿ ಕೂಡ ಅಡಚಣೆ ಇರುವುದು ಸರಿಯಷ್ಟೆ. ಇದು ದಾವಣಗೆರೆಯಲ್ಲಿ ಇದ್ದ ೬೦ ಎಂ.ವಿ.ಎ. ಸಾಮರ್ಥ್ಯದ ಎರಡು ಟ್ರಾನ್ಸ್‌ಫಾರ್ಮರುಗಳಲ್ಲಿ ಒಂದು ಕೆಟ್ಟು ಉಳಿದೊಂದು ಟ್ರಾನ್ಸ್‌ಫಾರ್ಮರಂ ಓವರ್ ಲೋಡಂ ಆದ ದೆಸೆಯಿಂದ, ದಾವಣಗೆರೆಯಂ ಈ ಟ್ರಾನ್ಸ್‌ಫಾರ್ಮರಂ ಬೆಂಗಳೂರಿನ ಎನ್.ಜಿ.ಇ.ಎಫ್, ಕಾರ್ಖಾನೆಯಲ್ಲಿ ದುರಸ್ತಿಗೊಂಡಂ ಸಿದ್ಧವಾಗುತ್ತಿದೆ. ಈ ಬೃಹತ್ ಟ್ರಾನ್ಸ್‌ಫಾರ್ಮರನ್ನು ಇಲ್ಲಿ ಕಾರ್ಖಾನೆಯ ಪರೀಕ್ಷೆಯಾದ ನಂತರ ದಾವಣಗೆರೆಯಲ್ಲಿ ಪುನಃ ಸ್ಥಾಪಿಸಿ ಎರಡು ತಾಲ್ಲೂಕುಗಳಲ್ಲಿನ ಅಡಚಣೆಯನ್ನು ನಿವಾರಿಸಲಾಗುತ್ತದೆ.

ಈ ಅಡಚಣೆಗಳು ಯಾಂತ್ರಿಕ ತೊಂದರೆಗಳಿಂದಾಗಿದ್ದು ಇನ್ನು ಸುಮಾರಂ ೬೫ ದಿನಗಳೊಳಗಾಗಿ ಸರಿಪಡಿಸಲು ಕರ್ನಾಟ ವಿದ್ಯುಚ್ಛಕ್ತಿ ಮಂಡಳಿಯು ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ.

ಶ್ರೀ ಸಿ. ಎಂ. ಉದಾಸಿ.—ಮಾನ್ಯ ಅಧ್ಯಕ್ಷರೆ, ಸಚಿವರು ನೀಡಿರುವ ಉತ್ತರದ ಬಗ್ಗೆ ನನ್ನ ಒಂದು ಸಂಶಯವೆಂದರೆ, ಹಾವೇರಿಯಲ್ಲಿರುವ ಈ ೫೫ ಕೆ.ವಿ., ೧೧ ಕೆ.ವಿ.ಯನ್ನು ವಿಂಗಡನೆಮಾಡಿ ವಿದ್ಯುತ್ ಸರಬರಾಜು ಮಾಡಂತಿದ್ದಾರೆ. ಇದರಲ್ಲಿ ಓಸಿಬಿ ಕೆಟ್ಟಿರುವುದರಿಂದ ವಿದ್ಯುತ್ ಸರಬರಾಜಿನಲ್ಲಿ ತೊಂದರೆಯಾಗುತ್ತಿದೆ. ಬ್ಯಾಡಗಿ, ಹಾನಗಲ್ ಮತ್ತು ರಾಣಿಬೆನ್ನೂರು, ಈ ೫೫ ಸೇರಿ ಒಂದೇ ಓಸಿಬಿ ಇರುವುದರಿಂದ, ಅಲ್ಲಿ ವಿದ್ಯುತ್ ಸರಬರಾಜಿಗೆ ತೊಂದರೆಯಾಗಿದೆ. ಹೀಗಿರುವುದರಿಂದ, ಅಲ್ಲಿ ವಿದ್ಯುತ್ ಸರಬರಾಜು ನಿಲುಗಡೆಯಾಗುತ್ತದೆ. ಈ ಓಸಿಬಿಗಳನ್ನು ಕೂಡಲೇ ದುರಸ್ತಿಗೊಳಿಸದಿದ್ದರೆ, ವಿದ್ಯುತ್ ಸರಬರಾಜಂ ಮಾಡಲಾಗುವುದಿಲ್ಲ. ಇದನ್ನು ಸಮಗ್ರವಾಗಿ ವಿಚಾರಿಸಿ, ಈ ಬಗ್ಗೆ ಸೂಕ್ತ ಕ್ರಮವನ್ನು ಮಾನ್ಯ ಸಚಿವರು ತೆಗೆದುಕೊಳ್ಳುತ್ತಾರೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ಜೆ. ಹೆಚ್. ದೇಶಮುಖ್.—ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಹಾಗೆ ಅದರ ಬಗ್ಗೆ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಬೇಕೆಂದಂ ವಿದ್ಯುತ್‌ಚ್ಛಕ್ತಿ ಮಂಂಡಲಿಗೆ ಆದೇಶ ನೀಡುತ್ತೇನೆ.

ಶ್ರೀ ಸಿ. ಎಂ. ಉದಾಸಿ.—ಮಾನ್ಯ ಅಧ್ಯಕ್ಷರೆ, ದಿನನಿತ್ಯ ನಮ್ಮಲ್ಲಿ ಸಂಜೆ ೬ ರಿಂದ ೧೦ ಗಂಟೆಯವರೆಗೆ ವಿದ್ಯುತ್ ಇರುವುದಿಲ್ಲ. ಹಾವೇರಿ ತಾಲ್ಲೂಕನ್ನು ಹೊರತುಪಡಿಸಿ, ಉಳಿದ ಕಡೆಗಳಲ್ಲಿ ವಿದ್ಯುತ್ ಸರಬರಾಜು ಇರುವುದಿಲ್ಲ. ಎಷ್ಟು ದಿನಗಳಲ್ಲಿ ಇದನ್ನು ಮಾಡಿ ಮುಗಿಸುತ್ತೀರೆಂಬುದನ್ನು ತಿಳಿಸಬೇಕಂ.

ಶ್ರೀ ಜೆ. ಎಚ್. ದೇಶಮುಖ್.—ಮಾನ್ಯ ಅಧ್ಯಕ್ಷರೆ, ಎಷ್ಟು ಸಾಧ್ಯವೋ ಅಷ್ಟು ಬೇಗ ಅದನ್ನು ಮುಗಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.— ಶ್ರೀ ಮಾಸ್ ಬಿ. ಲಕ್ಕಪ್ಪ ನವರ ಗಮನ ಸೆಳೆಯುವ ಸೂಚನೆಯನ್ನು ಮುಂದಕ್ಕೆ ಹಾಕಲಾಗಿದೆ.